1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 10101-2012

ಸಿಡಬ್ಲೂ - 43 ಪಿಡಬ್ಲೂ-9

| | |
|---|---|
| ಸಾಕ್ಷಿದಾರರ ಹೆಸರು | : ವೇಲು |
| ತಂದೆಯ ಹೆಸರು | : ಕೆ ಸಿ ಸುಬ್ಬು |
| ವಯಸ್ಸು | : 50 ವರ್ಷ |
| ಕೆಲಸ | : ಖಾಸಗಿ ಕೆಲಸ |
| ವಾಸ | : ಉತ್ತರಹಳ್ಳಿ, ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 10-02-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ಆರೋಪಿತರು ಗೊತ್ತು. ಚಾಸಾ58 ಮತ್ತು 59 ರವರು ಗೊತ್ತು. ಸಾಕ್ಷಿಗೆ ದಿ. 24-06-2011 ರ ಒಂದು ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.29 ಎಂದು ಸಾಕ್ಷಿಯ ಸಹಿಯನ್ನು ನಿಪಿ.29ಎ ಎಂದು ಗುರುತಿಸಲಾಯಿತು.

ಐಶ್ವರ್ಯ ಬಿಲ್‌ಟೆಕ್ ಕಂಪನಿಯಲ್ಲಿ 5 ಜನ ಪಾಲುದಾರರು ಇದ್ದರು. ಆ ಪೈಕಿ 1 ಮತ್ತು 2ನೇ ಆರೋಪಿತರು ಸಹ ಪಾಲುದಾರರು ಆಗಿದ್ದರು. ನಾನು ಸದರಿ ಕಂಪನಿಯಲ್ಲಿ 2004 ರಿಂದ 2008 ರವರೆಗೆ ಲೆಕ್ಕಪತ್ರಗಳನ್ನು ನೋಡುವ ಕೆಲಸ ನಿರ್ವಹಿಸುತ್ತಿದ್ದೆ. 2008 ರ ನಂತರ ಸದರಿ ಕಂಪನಿಯನ್ನು ಮುಚ್ಚಿದ ಕಾರಣ ನನ್ನನ್ನು ಪ್ರೆಸಿಡೆನ್ಸಿ ಗ್ರೂಪ್ಸ್ ಕಂಪನಿಗೆ ಕೆಲಸಕ್ಕೆ ಹೋಗುವಂತೆ 1ನೇ ಆರೋಪಿ ತಿಳಿಸಿದ್ದರು. ಅಲ್ಲಿ ನಿವೇಶನ ಮಾಡಿ ವ್ಯಾಪಾರ ಮಾಡುವ ಬಗ್ಗೆ ವ್ಯವಹಾರ ನಡೆಯುತ್ತಿತ್ತು.

ಸದರಿ ಕಂಪನಿಗಳು ಹಣವನ್ನು ತೆಗೆದುಕೊಂಡು ನಿವೇಶನ ಕೊಟ್ಟಿರುವುದಿಲ್ಲ ಎಂಬ ವಿಚಾರವಾಗಿ ಕೇಸುಗಳು ದಾಖಲಾಗಿದ್ದವು. ಆ ಸಮಯದಲ್ಲಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಸಿಬ್ಬಂದಿಗಳನ್ನು ಸಿಸಿಬಿಯವರು ಸಾಕ್ಷಿದಾರರಾಗಿ ಕರೆದಿದ್ದರು. ಆ ಸಮಯದಲ್ಲಿ ನನಗೆ ಗೊತ್ತಿದ್ದ ಎಲ್ಲಾ ವಿಚಾರಗಳನ್ನು ನಾನು

ಸಿಸಿಬಿಯವರ ಮುಂದೆ ಹೇಳಿರುತ್ತೇನೆ. ಆ ಸಮಯದಲ್ಲಿ ನನಗೆ ಗೊತ್ತಿದ್ದ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅಂದರೆ ಮೂಲ ಕರಾರು ಪತ್ರಗಳು ಮತ್ತು ಇತರೆ ದಾಖಲೆಗಳನ್ನು ಹಾಜರುಪಡಿಸಿದ್ದೆ. ಮೂಲ ದಾಖಲೆಗಳು ಸಿಸಿ ನಂ.5473/2012 ರಲ್ಲಿ ನಿಪಿ.137 ರಿಂದ 154 ಎಂದು ಗುರುತಿಸಲ್ಪಟ್ಟಿರುತ್ತವೆ.

(ಈ ಹಂತದಲ್ಲಿ ಮೂಲ ದಾಖಲೆಗಳನ್ನು ಹಾಜರುಪಡಿಸುವ ವಿಚಾರವಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ